**Akashvani : Bangalore**
**National Bulletin In Kannada**
**10.05.2024 / 19.35 hrs**

ಆಕಾಶವಾಣಿ, ಬೆಂಗಳೂರು

**<><*<><>*><>**

ಮುಖ್ಯಾಂಶಗಳು

**೧. ಮತದಾನ ಪ್ರಮಾಣದ ಮಾಹಿತಿ ಬಿಡುಗಡೆ ವಿಳಂಬ ಕುರಿತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪ- ಚುನಾವಣಾ ಆಯೋಗದಿಂದ ಉತ್ತರ**

**೨. ಅಬಕಾರಿ ನೀತಿ ಹಗರಣ; ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ೨೧ ದಿನಗಳ ಮಧ್ಯಂತರ ಜಾಮೀನು**

**೩. ೭೭ನೇ ಕೇನ್ಸ್ ಚಲನಚಿತ್ರೋತ್ಸವದಲ್ಲಿ ಭಾರತ ಭಾಗಿ; ಮೊದಲ ಬಾರಿಗೆ ಭಾರತ್ ಪರ್ವ್ ಆಯೋಜನೆ**

**೪. ಐಪಿಎಲ್ ಕ್ರಿಕೆಟ್; ಗುಜರಾತ್ ಟೈಟಾನ್ಸ್ -ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಖಾಮುಖಿ**

**<><*<><>*><>**

ಮತದಾನ ಪ್ರಮಾಣದ ಮಾಹಿತಿ ಬಿಡುಗಡೆಯಲ್ಲಿ ವಿಳಂಬ ಹಾಗೂ ಅಸಮರ್ಪ ನಿರ್ವಹಣೆ ಕುರಿತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾಡಿರುವ ಆರೋಪಗಳನ್ನು ಕೇಂದ್ರ ಚುನಾವಣಾ ಆಯೋಗ ಅಲ್ಲಗೆಳದಿದೆ. ಈ ಆರೋಪಗಳು ಅನಪೇಕ್ಷಿತವಾಗಿದ್ದು, ವಸ್ತುನಿಷ್ಠವಾಗಿಲ್ಲ. ಆರೋಪಗಳು ಪಕ್ಷಪಾತವಾಗಿದ್ದು, ಇದು ಗೊಂದಲವನ್ನು ಹಬ್ಬಿಸುವ ಪ್ರಯತ್ನವಾಗಿದೆ ಎಂದು ಆಯೋಗ, ಖರ್ಗೆಯವರಿಗೆ ಬರದಿರುವ ಪತ್ರದಲ್ಲಿ ಹೇಳಿದೆ. ಮತದಾನ ಪ್ರಮಾಣ ಮಾಹಿತಿ ಬಿಡುಗಡೆಯಲ್ಲಿ ವಿಳಂಬ ಮಾಡಲಾಗಿದೆ ಹಾಗೂ ನೋಂದಣಿಯಾಗಿರುವ ಮತದಾರರ ಪಟ್ಟಿಯನ್ನು ಪ್ರಕಟಿಸಿಲ್ಲ ಎಂದು ಖರ್ಗೆಯವರು ಈ ಹಿಂದೆ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ

ಆರೋಪಿಸಿದ್ದರು. ರಾಷ್ಟ್ರೀಯ ಪಕ್ಷವೊಂದರಿಂದ ಚುನಾವಣೆಗಳ ವಿಶ್ವಾಸಾರ್ಹತೆ ಕುಂದಿಸುವ ಬೇಜಾವಬ್ದಾರಿ ಹೇಳಿಕೆಗಳು ಗೊಂದಲವನ್ನು ಉಂಟು ಮಾಡುತ್ತವೆ ಎಂದು ಆಯೋಗ ಹೇಳಿದೆ. ಚುನಾವಣಾ ಕ್ರಮಗಳು ಮತ್ತು ಪ್ರಕ್ರಿಯೆಗಳ ವಿಶ್ವಾಸಾರ್ಹತೆ ಕುರಿತು ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆಗಳು, ಚುನಾವಣೆಯಲ್ಲಿ ಮತದಾರರ ಪಾಲ್ಗೊಳ್ಳುವಿಕೆಯಲ್ಲಿ ನಕಾರಾತ್ಮಕ ಪರಿಣಾಮ ಉಂಟುಮಾಡಲಿವೆ ಎಂದಿರುವ ಆಯೋಗ, ಇಂತಹ ಹೇಳಿಕೆಗಳನ್ನು ನೀಡುವುದರಿಂದ ದೂರವಿರಬೇಕು ಮತ್ತು ಎಚ್ಚರ ವಹಿಸಬೇಕು ಎಂದು ಆಯೋಗ ಖರ್ಗೆಯವರಿಗೆ ಸಲಹೆ ಮಾಡಿದೆ.

<><*<><>*><>

ಬಸವ ಜಯಂತಿ ಅಂಗವಾಗಿ ಪ್ರಧಾನಿ ನರೇಂದ್ರಮೋದಿ, ಜಗದ್ಗುರು ಬಸವೇಶ್ವರರಿಗೆ ಗೌರವ ನಮನ ಸಲ್ಲಿಸಿದ್ದಾರೆ. ಬಸವೇಶ್ವರರ ತತ್ವಾದರ್ಶಗಳು ಕೋಟ್ಯಂತರ ಜನರ ಬದುಕಿನಲ್ಲಿ ಪ್ರಜ್ವಲಿಸಿವೆ ಎಂದು ಪ್ರಧಾನಿಯವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.

<><*<><>*><>

ಅಕ್ಷಯ ತೃತೀಯಾ ಅಂಗವಾಗಿ ಪ್ರಧಾನಿ ನರೇಂದ್ರಮೋದಿ ದೇಶದ ಜನತೆಗೆ ಶುಭ ಕೋರಿದ್ದಾರೆ. ಈ ಶುಭ ಸಂದರ್ಭವು ದಾನ ಮಾಡಲು ಜನರನ್ನು ಉತ್ತೇಜಿಸಲಿ, ಎಲ್ಲರ ಜೀವನದಲ್ಲಿ ಹೊಸ ಶಕ್ತಿ ಮತ್ತು ಚೈತನ್ಯವನ್ನು ತುಂಬಲಿ ಎಂದು ಪ್ರಧಾನಿಯವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹಾರೈಸಿದ್ದಾರೆ.

<><*<><>*><>

ದೇಶದ ಬುಡಕಟ್ಟು ಪ್ರದೇಶಗಳಲ್ಲಿ ಪಕ್ಕಾ ಮನೆಗಳು, ವಿದ್ಯುತ್ ಸಂಪರ್ಕ, ನಲ್ಲಿ ನೀರು ಸಂಪರ್ಕ, ಅನಿಲ ಸಂಪರ್ಕ ಮತ್ತು ಇತರ ಸೌಲಭ್ಯಗಳನ್ನು ಎನ್ ಡಿಎ ಸರ್ಕಾರ ಒದಗಿಸಿದೆ ಎಂದು ಬಿಜೆಪಿ ಹಿರಿಯ ನಾಯಕ ಹಾಗೂ ಪ್ರಧಾನಿ ನರೇಂದ್ರಮೋದಿ ಹೇಳಿದ್ದಾರೆ. ಮಹಾರಾಷ್ಟ್ರದ ನಂದುಬಾರ್‌ನಲ್ಲಿಂದು ಚುನಾವಣಾ ಪ್ರಚಾರ ಸಭೆಯನ್ನುದ್ದೇಶಿ ಮಾತನಾಡಿದ ಅವರು, ನಂದುಬಾರ್‌ನಲ್ಲಿ ಎನ್‌ಡಿಎ ಸರ್ಕಾರ, ಪಿಎಂ

ಆವಾಸ್ ಯೋಜನೆಯಡಿ ೧ ಲಕ್ಷ ೨೫ ಸಾವಿರ ಪಕ್ಕಾ ಮನೆಗಳನ್ನು ನಿರ್ಮಿಸಲಾಗಿದ್ದು, ಅಪೌಷ್ಟಿಕತೆ ಹೋಗಲಾಡಿಸಲು ೧೨ ಲಕ್ಷ ಜನರಿಗೆ ಉಚಿತ ಪಡಿತರ ವಿತರಿಸಲಾಗಿದೆ ಎಂದರು. ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಲು ಎನ್‌ಡಿಎ ಅವರ ಪರ ಮತ ಹಾಕಿದ್ದು, ಈ ಮೂಲಕ ಬುಡಕಟ್ಟು ಸಮುದಾಯದಿಂದ ಮೊದಲ ರಾಷ್ಟ್ರಪತಿಯನ್ನು ನೀಡಿದೆ. ಕಾಂಗ್ರೆಸ್ ಸರ್ಕಾರ ಬುಡಕಟ್ಟು ಪ್ರದೇಶಗಳನ್ನು ನಿರ್ಲಕ್ಷಿಸಿದೆ ಎಂದು ಅವರು ಆರೋಪಿಸಿದರು. ಮುಖ್ಯಮಂತ್ರಿ ಏಕನಾಥ್ ಶಿಂಧೆ, ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಮತ್ತು ಇತರ ಮುಖಂಡರು ಸಭೆಯಲ್ಲಿ ಭಾಗವಿಸಿದ್ದರು.

**<><*<><>*><>**

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಸುಪ್ರೀಂಕೋರ್ಟ್ ಇಂದು ೨೧ ದಿನಗಳ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಏಳು ಹಂತಗಳ ಲೋಕಸಭಾ ಚುನಾವಣೆ ಮುಕ್ತಾಯಗೊಂಡ ಮರುದಿನ ಜೂನ್ ೨ರಂದು ಶರಣಾಗುವಂತೆ ಕೇಜ್ರಿವಾಲ್ ಅವರಿಗೆ ನ್ಯಾಯಾಲಯ ಸೂಚಿಸಿದೆ. ಲೋಕಸಭಾ ಚುನಾವಣೆಯಲ್ಲಿ ಪ್ರಚಾರ ಮಾಡಲು ಜೈಲಿನಿಂದ ತಮ್ಮನ್ನು ಬಿಡುಗಡೆಗೊಳಿಸುವಂತೆ ಕೇಜ್ರೀವಾಲ್ ಕೋರಿದ್ದರು. ಕೇಜ್ರಿವಾಲ್ ಅವರನ್ನು ಬಂಧಿಸುವಲ್ಲಿ ಜಾರಿ ನಿರ್ದೇಶನಾಲಯ ವಿಳಂಬ ತೋರಿದೆ ಎಂದೂ ಸಹ ನ್ಯಾಯಲಯ ಹೇಳಿದೆ. ಕೇಜ್ರಿವಾಲ್ ವಿರುದ್ಧ ಜಾರಿ ನಿರ್ದೇಶನಾಲಯ ೨೦೨೨ರ ಆಗಸ್ಟ್‌ನಲ್ಲಿ ಜಾರಿ ಪ್ರಕರಣ ಮಾಹಿತಿ ವರದಿ ದಾಖಲಿಸಿದೆಯಾದರೂ ಈ ವರ್ಷದ ಮಾರ್ಚ್‌ನಲ್ಲಷ್ಟೇ ಅವರನ್ನು ಬಂಧಿಸಿದೆ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರನ್ನೊಳಗೊಂಡ ಪೀಠ ಹೇಳಿದೆ. ಜಾಮೀನಿನ ಷರತ್ತುಗಳಂತೆ ಕೇಜ್ರಿವಾಲ್ ಅವರು, ಮುಖ್ಯಮಂತ್ರಿ ಕಚೇರಿ ಮತ್ತು ದೆಹಲಿ ಸಚಿವಾಲಯಕ್ಕೆ ಹೋಗುವಂತಿಲ್ಲ. ಅಗತ್ಯ ಬಿದ್ದಲ್ಲಿ ಲೆಫ್ಟಿನೆಂಟ್ ಗೌರ್ನರ್ ಅವರ ಅನುಮತಿ ಪಡೆಯದ ಹೊರತು ಅಧಿಕೃತ ಕಡತಗಳಿಗೆ ಸಹಿ ಹಾಕುವಂತಿಲ್ಲ. ಅಲ್ಲದೆ, ಪ್ರಸ್ತುತ ಪ್ರಕರಣ ಪ್ರಕರಣದಲ್ಲಿ

ತಮ್ಮ ಪಾತ್ರದ ಕುರಿತು ಯಾವುದೇ ಹೇಳಿಕೆಯನ್ನು ಕೇಜ್ರಿವಾಲ್ ನೀಡುವಂತಿಲ್ಲ ಮತ್ತು ಯಾವುದೇ ಸಾಕ್ಷ್ಯದಾರರೊಂದಿಗೆ ಅವರು ಮಾತನಾಡುವಂತಿಲ್ಲ.

**<><*<><>*><>**

ಭಾರತೀಯ ನೌಕಾಪಡೆಯ ಸಿಬ್ಬಂದಿ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಸಂಜಯ್ ಭಲ್ಲಾ ಇಂದು ಅಧಿಕಾರ ವಹಿಸಿಕೊಂಡಿದ್ದಾರೆ. ಸಂಜಯ್ ಭಲ್ಲಾ ಅವರು ೧೯೮೯ರ ಜನವರಿ ೧ರಂದು ಭಾರತೀಯ ನೌಕಾಪಡೆಗೆ ಸೇರಿದ್ದರು. ಸಂವಹನ ಮತ್ತು ವಿದ್ಯುನ್ಮಾನ ಶಸ್ತ್ರಾಸ್ತ್ರ ವಿಷಯಗಳಲ್ಲಿ ಅವರು ಪರಿಣಿತಿ ಪಡೆದಿದ್ದಾರೆ. ಐಎನ್ಎಸ್ ನಿಶಾಂಕ್, ಐಎನ್ಎಸ್ ಬಿಯಾಸ್ ಸೇರಿದಂತೆ ಅನೇಕ ನೌಕೆಗಳಲ್ಲಿ ಸವಾಲಿನ ಕರ್ತವ್ಯಗಳನ್ನು ಅವರು ನಿಭಾಯಿಸಿದ್ದಾರೆ.

**<><*<><>*><>**

ಹರಿಯಾಣದಲ್ಲಿ ಬಿಜೆಪಿ ಸರ್ಕಾರಕ್ಕೆ ಮೂವರು ಪಕ್ಷೇತರ ಶಾಸಕರು ರಾಜಿನಾಮೆ ನೀಡಿರುವ ಹಿನ್ನಲೆಯಲ್ಲಿ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸುವಂತೆ ಕಾಂಗ್ರೆಸ್ ಒತ್ತಾಯಿಸಿದೆ. ದೆಹಲಿಯಲ್ಲಿಂದು ಮಾಧ್ಯಮಗಳೊಂದಿಗೆ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಹರಿಯಾಣ ಸರ್ಕಾರ ಸ್ಪಷ್ಟವಾಗಿ ಬಹುಮತ ಕಳೆದುಕೊಂಡಿದ್ದು, ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಸೂಕ್ತವಾಗಿದೆ. ಹರಿಯಾಣ ಮತ್ತು ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಕಳೆದುಕೊಳ್ಳುವ ದಿನಗಳು ಹತ್ತಿರವಾಗುತ್ತಿವೆ ಎಂದು ಹೇಳಿದರು.

**<><*<><>*><>**

ಫ್ರಾನ್ಸ್‌ನಲ್ಲಿ ಈ ತಿಂಗಳ ೧೪ ರಿಂದ ೨೫ರವರೆಗೆ ನಡೆಯಲಿರುವ ೭೭ನೇ ಕೇನ್ಸ್ ಚಲನಚಿತ್ರೋತ್ಸವದಲ್ಲಿ ಭಾರತ ಭಾಗಿಯಾಗಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ಹಾಗೂ ಚಲನಚಿತ್ರ ಉದ್ಯಮದ ಸದಸ್ಯರನ್ನೊಳಗೊಂಡ ಭಾರತೀಯ ಕಾರ್ಪೊರೇಟ್ ನಿಯೋಗ, ವಿಶ್ವದ ಸಿನಿಮಾ ಮಾರುಕಟ್ಟೆಯಲ್ಲಿ ಭಾರತದ ಸೃಜನಶೀಲ ಆರ್ಥಿಕತೆಯನ್ನು ಪ್ರದರ್ಶಿಸಲಿದೆ. ಮೊದಲ ಬಾರಿಗೆ ಭಾರತ, ಕೇನ್ಸ್

ಚಲನಚಿತ್ರೋತ್ಸವದಲ್ಲಿ ಭಾರತ್ ಪರ್ವ್ ಆಯೋಜಿಸಲಿದೆ ಎಂದು ವಾರ್ತಾ ಮತ್ತು ಪ್ರಸಾರ ಖಾತೆ ಸಚಿವಾಲಯ ತಿಳಿಸಿದೆ. ಭಾರತೀಯ ಚಲನಚಿತ್ರ ಸಮುದಾಯ ವಿವಿಧ ಚುಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕೇನ್ಸ್‌ನಲ್ಲಿ ಭಾರತ್ ಪೆವಿಲಿಯನ್ ವೇದಿಕೆಯಾಗಿ ಕಾರ್ಯ ನಿರ್ವಹಿಸಲಿದೆ. ಭಾರತ್ ಪರ್ವ್‌ನಲ್ಲಿ ಗೋವಾದಲ್ಲಿ ನಡೆಯುವ ೫೫ನೇ ಭಾರತ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಅಧಿಕೃತ ಪೋಸ್ಟರ್ ಮತ್ತು ಟ್ರೈಲರ್ ಬಿಡುಗಡೆ ಮಾಡಲಾಗುವುದು.

**<><*<><>*><>**

ಧಾರ್ಮಿಕ ಮೀಸಲಾತಿಯನ್ನು ಒದಗಿಸುವುದರ ಮೂಲಕ ಸಂವಿಧಾನವನ್ನು ಬದಲಿಸುವ ಉದ್ದೇಶವನ್ನು ಕಾಂಗ್ರೆಸ್ ಹೊಂದಿದೆ ಎಂದು ಬಿಜೆಪಿ ಹಿರಿಯ ನಾಯಕ ಹಾಗೂ ಪ್ರಧಾನಿ ನರೇಂದ್ರಮೋದಿ ಆರೋಪಿಸಿದ್ದಾರೆ. ಖಾಸಗಿ ಟಿವಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಮೂಲಕ ಕಾಂಗ್ರೆಸ್, ಈ ಮುನ್ನ ಸಂವಿಧಾನದ ಆಶಯಕ್ಕೆ ಚ್ಯುತಿ ತಂದಿತ್ತು. ಜಾತಿ, ಧರ್ಮದ ಆಧಾರದಡಿ ಯಾವುದೇ ತಾರತಮ್ಯ ಇರಬಾರದು ಎಂದು ಹೇಳಿದರು. ಭಾರತೀಯರ ಚರ್ಮ ಬಣ್ಣ ಕುರಿತು ಕಾಂಗ್ರೆಸ್ ನಾಯಕ ಸ್ಯಾಮ್ ಪಿತ್ರೋಡ ಅವರ ಹೇಳಿಕೆ ಕಾಂಗ್ರೆಸ್‌ನ ಮನೋಸ್ಥಿತಿಯನ್ನು ಬಿಂಬಿಸುತ್ತದೆ. ವೈವಿಧ್ಯತೆಯಲ್ಲಿ ಏಕತೆಯನ್ನು ಭಾರತದಲ್ಲಿ ಕಾಣಬಹುದಾಗಿದ್ದು, ಕಪ್ಪು ಅಥವಾ ಬಿಳಿ ಎಂಬುದಿಲ್ಲ ಎಂದು ಅವರು ಹೇಳಿದ್ದಾರೆ.

**<><*<><>*><>**

ಪಾಕಿಸ್ತಾನ ಕುರಿತ ಕಾಂಗ್ರೆಸ್ ನಾಯಕ ಮಣಿ ಶಂಕರ್ ಅಯ್ಯರ್ ಅವರ ಹೇಳಿಕೆ ಹಿನ್ನೆಲೆಯಲ್ಲಿ ಬಿಜೆಪಿ, ಕಾಂಗ್ರೆಸ್ ಪಕ್ಷವನ್ನು ಕಟುವಾಗಿ ಟೀಕಿಸಿದೆ. ಪರಮಾಣು ಶಕ್ತಿಯಾಗಿರುವ ಪಾಕಿಸ್ತಾನವನ್ನು ಭಾರತ ಗೌರವಿಸಬೇಕು ಎಂದು ಅಯ್ಯರ್ ಹೇಳಿದ್ದಾರೆನ್ನಲಾಗಿದೆ. ದೆಹಲಿಯಲ್ಲಿಂದು ಮಾಧ್ಯಮಗಳೊಂದಿಗೆ ಮಾತನಾಡಿದ ಬಿಜೆಪಿ ಹಿರಿಯ ನಾಯಕ ಹಾಗೂ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಮಣಿಶಂಕರ್ ಅಯ್ಯರ್ ಅವರ ಹೇಳಿಕೆ, ಇತ್ತೀಚಿನ ಸ್ಯಾಮ್ ಪಿತ್ರೋಡ ಅವರ

ಆಕ್ಷೇಪಾರ್ಹ ಹೇಳಿಕೆಗಳು ಕಾಂಗ್ರೆಸ್‌ನ ಸಿದ್ಧಾಂತ, ನೀತಿ ಮತ್ತು ಉದ್ದೇಶಗಳನ್ನು ಬಿಂಬಿಸುತ್ತವೆ ಎಂದು ಟೀಕಿಸಿದರು.

<><*<><>*><>

ವೋಟ್ ಬ್ಯಾಂಕ್‌ಗಾಗಿ ತೃಣಮೂಲ ಕಾಂಗ್ರೆಸ್, ಬಾಂಗ್ಲಾದೇಶದ ಒಳನುಸುಳುಕೋರರನ್ನು ಪ್ರೋತ್ಸಾಹಿಸುತ್ತದೆ ಎಂದು ಬಿಜೆಪಿ ಹಿರಿಯ ನಾಯಕ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ. ಪಶ್ಚಿಮ ಬಂಗಾಳದ ರಾಣಾಘಾಟ್‌ನಲ್ಲಿ ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಪೌರತ್ವ ತಿದ್ದುಪಡಿ ಕಾಯ್ದೆ ಹೆಸರಿನಲ್ಲಿ ತೃಣಮೂಲ ಕಾಂಗ್ರೆಸ್ ವರಿಷ್ಠೆ ಮಮತಾ ಬ್ಯಾನರ್ಜಿ, ಸಾಮಾನ್ಯ ಜನರನ್ನು ಪ್ರಚೋದಿಸುತ್ತಿದ್ದಾರೆ ಎಂದು ಆರೋಪಿಸಿದರು. ಸಂದೇಶ್ ಖಾಲಿ, ಘಟನೆ ಹಿಂದಿರುವ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಬೇಕು. ಕಾಂಗ್ರೆಸ್ ಮತ್ತು ತೃಣಮೂಲಕ ಕಾಂಗ್ರೆಸ್ ಎರಡೂ ಪಕ್ಷಗಳು ಭ್ರಷ್ಟಚಾರದಿಂದ ಕೂಡಿವೆ. ನೇಮಕಾತಿ ಸೇವೆಗಳು, ಪೌರಾಡಳಿತ ನೇಮಕಾತಿಗಳು ಶಿಕ್ಷಕರ ನೇಮಕಾತಿಯಲ್ಲಿ ನಡೆದ ಭ್ರಷ್ಟಾಚಾರಗಳು ಪಶ್ಚಿಮ ಬಂಗಾಳದ ಆಡಳಿತಾರೂಢ ಪಕ್ಷದಿಂದಲೇ ನಡೆದಿವೆ ಎಂದು ಅವರು ಆರೋಪಿಸಿದರು. ತೃಣಮೂಲ ಕಾಂಗ್ರೆಸ್ ಅನ್ನು ತಿರಸ್ಕರಿಸಿ ಅಭಿವೃದ್ಧಿ ಮತ ನೀಡುವಂತೆ ಅಮಿತ್ ಶಾ ಮತದಾರರಿಗೆ ಮನವಿ ಮಾಡಿದರು.

<><*<><>*><>

ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗುಜರಾತ್ ಟೈಟಾನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.